2025ನೇ ಇಸವಿ ತೆರೆಮರೆಗೆ ಸರಿಯಲು ಇನ್ನು ಇರುವುದು ಕೆಲವೇ ದಿನಗಳು. ವರ್ಷಾಂತ್ಯದ ಹೊತ್ತಿನಲ್ಲಿ ದೇಶ ವಿದೇಶದಲ್ಲಿ ಈ ವರ್ಷ ಜರುಗಿದ ಘಟನೆಗಳು, ಬೆಳವಣಿಗೆಗಳನ್ನು ಅವಲೋಕಿಸಿದರೆ 2025 ಮಾನವ ಕುಲಕ್ಕೆ ಸಿಹಿಗಿಂತ ಕಹಿಯನ್ನೇ ಹೆಚ್ಚು ಉಣಬಡಿಸಿದೆ. ಭಯೋತ್ಪಾದನಾ ದಾಳಿಗಳು, ಸೇನಾ ಸಂಘರ್ಷಗಳು, ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳು, ಭಾರಿ ಸಾವು ನೋವು ಉಂಟು ಮಾಡಿದ ದುರಂತಗಳು... ಹೀಗೆ ಕಹಿ ಘಟನೆಗಳೇ ಹೆಚ್ಚು ಕಾಣಿಸುತ್ತಿವೆ.

■ ಸೂರ್ಯನಾರಾಯಣ ವಿ.




# ಸರಿಯುವ ಮುನ್ನ...

## ದೆಹಲಿ ಕಾರು ಸ್ಫೋಟ

ನವೆಂಬರ್ 10ರಂದು ದೆಹಲಿಯಲ್ಲಿ ನಡೆದ ಕಾರು ಬಾಂಬ್ ಸ್ಫೋಟವು ಈ ವರ್ಷ ನಡೆದ ಇನ್ನೊಂದು ಪ್ರಮುಖ ಭಯೋತ್ಪಾದನಾ ಕೃತ್ಯ. ಐತಿಹಾಸಿಕ ಕೆಂಪುಕೋಟೆಯ ಸಮೀಪದ ಮೆಟ್ರೊ ನಿಲ್ದಾಣದ ಬಳಿ ಕಾರೊಂದು ಸ್ಫೋಟಗೊಂಡು 10 ಮಂದಿ ಮೃತಪಟ್ಟು, 32ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ನಾಲ್ವರು ವೈದ್ಯರನ್ನೊಳಗೊಂಡ ಜಾಲ ಈ ಕೃತ್ಯವನ್ನು ಎಸಗಿದೆ ಎಂದು ತನಿಖಾ ಸಂಸ್ಥೆ ಎನ್‌ಐಎ ಹೇಳಿದೆ. ಇದು ಭಯೋತ್ಪಾದನಾ ದಾಳಿ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ತನಿಖಾ ಸಂಸ್ಥೆಗಳು ಇದನ್ನು 'ವೈಟ್ ಕಾಲರ್' ಭಯೋತ್ಪಾದನೆ ಎಂದು ಕರೆದಿವೆ. ತನಿಖೆ ನಡೆಸುತ್ತಿರುವ ಎನ್‌ಐಎ ಈವರೆಗೆ ಎಂಟು ಶಂಕಿತರನ್ನು ಬಂಧಿಸಿದೆ.



## ವಿಮಾನ ಪತನ: ಕರಟಿಹೋದ ಕನಸುಗಳು



ವಿಮಾನಯಾನ ಕ್ಷೇತ್ರದಲ್ಲಿ ನಡೆದ ಮಹಾ ದುರಂತವೊಂದು ಭಾರತದಲ್ಲಿ ಈ ವರ್ಷ ಸಂಭವಿಸಿತು. ಗುಜರಾತ್‌ನ ಅಹಮದಾಬಾದ್ ವಿಮಾನ ನಿಲ್ದಾಣದಿಂದ ಜೂನ್ 12 ಮಧ್ಯಾಹ್ನ 1.30ರ ಸುಮಾರಿಗೆ ಬ್ರಿಟನ್‌ನ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ಸಂಸ್ಥೆಯ ಬೋಯಿಂಗ್ 787–8 ಡ್ರೀಮ್ ಲೈನರ್ ವಿಮಾನ (ವಿಮಾನ ಸಂಖ್ಯೆ 171) ಟೇಕ್ ಆಫ್ ಆದ 32 ಸೆಕೆಂಡ್‌ಗಳಲ್ಲಿ ನೂಕು ಬಲದ ಕೊರತೆಯಿಂದ ಮೇಲಕ್ಕೆ ಹಾರಲಾಗದೆ ರನ್‌ವೇನಿಂದ ಹೊರಗಡೆ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಕಟ್ಟಡದ ಮೇಲೆ ಪತನಗೊಂಡಿತ್ತು. ಒಬ್ಬ ಪ್ರಯಾಣಿಕನನ್ನು ಬಿಟ್ಟು ಇಬ್ಬರು ಪೈಲಟ್‌ಗಳು ಸೇರಿ 12 ಸಿಬ್ಬಂದಿ ಹಾಗೂ 230 ಪ್ರಯಾಣಿಕರು ಏನಾಗುತ್ತಿದೆ ಎಂಬುದು ಅರಿವಿಗೆ ಬರುವುದಕ್ಕೂ ಮೊದಲು ಸುಟ್ಟು ಕರಕಲಾದರು. ಇದರೊಂದಿಗೆ ವಿವಿಧ ಕನಸುಗಳ ಬೆನ್ನತ್ತಿ ಬ್ರಿಟನ್‌ಗೆ ಹೊರಟಿದ್ದ ಅವರ ಕನಸುಗಳೂ ಕರಟಿಹೋದವು. ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರು ಕೂಡ ಈ ನತದೃಷ್ಟ ವಿಮಾನದಲ್ಲಿದ್ದರು. ಪತನಗೊಳ್ಳುವುದಕ್ಕೂ ಮುನ್ನ ಧೈರ್ಯ ಮಾಡಿ ವಿಮಾನದಿಂದ ಹೊರಕ್ಕೆ ಜಿಗಿದಿದ್ದ ವಿಶ್ವಾಸ್‌ಕುಮಾರ್ ರಮೇಶ್ ಅವರು ಪವಾಡ ಸದೃಶವಾಗಿ ಬದುಕುಳಿದಿದ್ದರು. ಈಗಲೂ ಅವರು ಆಘಾತದಿಂದ ಹೊರಬಂದಿಲ್ಲ. ವಿಮಾನ ದುರಂತದ ತನಿಖೆ ಆರು ತಿಂಗಳಾದರೂ ಪೂರ್ಣವಾಗಿಲ್ಲ. ವಿಮಾನ ಟೇಕ್ ಆಫ್ ಆದ ತಕ್ಷಣದಲ್ಲೇ ಎಂಜಿನ್‌ಗೆ ಪೂರೈಕೆಯಾಗುತ್ತಿದ್ದ ಇಂಧನದ ಸ್ವಿಚ್ ಆಫ್ ಆಗಿತ್ತು ಎಂದು ಪ್ರಾಥಮಿಕ ತನಿಖಾ ವರದಿ ಹೇಳಿದೆ.